ಇಂದು ದಿ**: 26.02.2026** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು**.**

ಪಾಟೀಸವಾಲು **1** ನೇ ಪ್ರತಿವಾದಿಯ ಪರ:ಶ್ರೀ ಓ ಎಂ ವಕೀಲರಿಂದ **.**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರಕ್ಕೆ ಮಾಹಿತಿಯನ್ನು ನಾನೇ ಕೊಟ್ಟಿರುತ್ತೇನೆ. ಸರ್ವೇ ನಂ. 70 ಕ್ಕೆ ಸಂಬಂಧಿಸಿದಂತೆ ವಾದಿ ದಾವೆಯನ್ನು ಸಲ್ಲಿಸಿರುತ್ತಾನೆ. ಸರ್ವೆ ನಂ. 70 ರಲ್ಲಿ ಎಷ್ಟು ಪೋಡುಗಳು ಇರುತ್ತವೆ ಎಂದು ಗೊತ್ತಿರುವುದಿಲ್ಲ. 2 ಎಕರೆ 30 ಗುಂಟೆ ಜಮೀನಿಗೆ ದಾವೆಯನ್ನು ಸಲ್ಲಿಸಿರುತ್ತಾನೆ. ಸದರಿ 2 ಎಕರೆ 30 ಗುಂಟೆ ಜಮೀನಿನ ಚೆಕ್ ಬಂದಿ ಪೂರ್ವಕ್ಕೆ ತಿಮ್ಮಪ್ಪ, ಪಶ್ಚಿಮಕ್ಕೆ ಸಣ್ಣೀರಪ್ಪ, ಉತ್ತರಕ್ಕೆ ಕರಡಿ ರಾಮಯ್ಯ, ದಕ್ಷಿಣಕ್ಕೆ ದಾಸಪ್ಪ. ದಾವಾ ಆಸ್ತಿಗೆ 1 ನೇ ಪ್ರತಿವಾದಿಯೇ ಮಾಲಕನಾಗಿ ಸ್ವಾಧೀನತೆಯಲ್ಲಿ ಇರುತ್ತಾನೆ ಎಂದರೆ ಸರಿಯಲ್ಲ. ನಾನು ಮತ್ತು ವಾದಿ ವಿಶ್ವಾಸಿಕರು ಮತ್ತು ಚೆನ್ನಾಗಿ ಇರುತ್ತೇವೆ ಎಂದರೆ ಸಾಕ್ಷಿ ಊರಿನವರೆಲ್ಲರು ಚೆನ್ನಾಗಿ ಇರುತ್ತಾರೆ ಎಂದು ಹೇಳುತ್ತಾರೆ. ನಾನು ವಾದಿಯ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 4 ಮತ್ತು 5 ಪ್ರತಿವಾದಿಗಳ ಪರ ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.